**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,</u>**

**<u>ಮೂಡಿಗೆರೆ</u>**

**<u>ಸಿ.ಸಿ. ಸಂಖ್ಯೆ: 899/2022</u>**

**<u>ಪಿರ್ಯಾದಿ</u>** : ರಾಜ್ಯ, ಪರವಾಗಿ ಬಣಕಲ್ ಪೊಲೀಸ್ ಠಾಣೆ,
ಮೂಡಿಗೆರೆ.

**ವಿರುದ್ಧ**

**<u>ಆರೋಪಿ</u>** :

1. ಬಿ.ಎಸ್.ಇಂದ್ರೇಶ್ ಬಿನ್ ಲೇಟ್ ಸುಬ್ಬೇಗೌಡ,
   ವಯಸ್ಸು ಸುಮಾರು 54 ವರ್ಷ,

2. ಬಿ.ಬಿ.ಅಶೋಕ್ ಬಿನ್ ಲೇಟ್ ಬೈರೇಗೌಡ,
   ವಯಸ್ಸು ಸುಮಾರು 59 ವರ್ಷ,

3. ಅಶ್ವಿನ್ ಬಿ.ಎ. ಬಿನ್ ಅಶೋಕ ಬಿ.ಬಿ.
   ವಯಸ್ಸು ಸುಮಾರು 24 ವರ್ಷ,

4. ರಜೀತ್ ಬಿ.ಕೆ. ಬಿನ್ ಬಿ.ಎಂ ಕೃಷ್ಣೇಗೌಡ ,
   ವಯಸ್ಸು ಸುಮಾರು 28 ವರ್ಷ,

ಆರೋಪಿತರೆಲ್ಲರೂ ವಾಸ: ಬಕ್ಕಿ ಗ್ರಾಮ,
ಬಣಕಲ್ ಹೋಬಳಿ, ಮೂಡಿಗೆರೆ ತಾಲ್ಲೂಕು.

**<u>ದೋಷಾರೋಪಣೆ</u>**

ನಾನು ವಿಶ್ವನಾಥ್ ಎ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆಗಳು ಏನೆಂದರೆ:-

**1**. ದಿನಾಂಕ 17.01.2022 ರಂದು ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ ಚಾಸಾ-1 ರವರು ಮೂಡಿಗೆರೆ ತಾಲ್ಲೂಕು ಬಣಕಲ್ ಹೋಬಳಿ, ಬಕ್ಕಿ ಗ್ರಾಮದ ಸ.ನಂ.40 ರ ಕಾಫಿ ಹಾಗೂ ಕಾಳುಮೆಣಸು ತೋಟಕ್ಕೆ ಕಾಫಿ ಬೇಳೆಯನ್ನು ಆರಿಸಲು ಹೋಗಿದ್ದ ಸಮಯದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಸದರಿ ಜಮೀನಿಗೆ ಬಂದು ಚಾಸಾ-1 ರವರು ನೆಟ್ಟಿದ್ದ ಮರ ಮತ್ತು ಕಲ್ಲು ಕಂಬದ ಬೇಲಿಯನ್ನು ಕೀಳುತ್ತಿದ್ದಾಗ ಚಾಸಾ-1 ರವರು ಬೇಲಿಯನ್ನು ಏಕೆ ಕೀಳುತ್ತಿದ್ದೀರಾ ಕೀಳಬೇಡಿ ಎಂದು ಹೇಳಿದಾಗ ಆರೋಪಿತರಾದ ನೀವು ಬೇಲಿಯನ್ನು ಕಿತ್ತೇ ಕೀಳುತ್ತೇವೆ ಬೇವರ್ಸಿಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು **ಭಾರತ ದಂಡ ಸಂಹಿತೆ ಕಲಂ** 504 **ಸಹವಾಚಕ ಕಲಂ** 34 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**2**. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಮುಂದುವರೆದು, 2 ನೇ ಆರೋಪಿಯಾದ ನೀವು ಚಾಸಾ-1 ರವರನ್ನು ದೂಡಿ ಕೆಳಗೆ ಬೀಳಿಸಿ ಕೈಯಿಂದ ಬೆನ್ನಿಗೆ ಗುದ್ದಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯಾ 2 ನೇ ಆರೋಪಿಯಾದ ನೀವು **ಭಾರತ ದಂಡ ಸಂಹಿತೆ ಕಲಂ** 323 **ಸಹವಾಚಕ ಕಲಂ** 34 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**3.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಮುಂದುವರೆದು, ಚಾಸಾ1 ರವರು ಬೇಲಿಯನ್ನು ಕೀಳುತ್ತಿದ್ದವರನ್ನು

ತಡೆಯಲು ಹೋದಾಗ 1 ನೇ ಆರೋಪಿಯಾದ ನೀವು ಕೈಯಲ್ಲಿದ್ದ ಕತ್ತಿಯಿಂದ ಚಾಸಾ-1 ರವರ ಎಡಗೈ ಮಣಿಕಟ್ಟಿನ ಹತ್ತಿರ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯಾ 1 ನೇ ಆರೋಪಿಯಾದ ನೀವು **ಭಾರತ ದಂಡ ಸಂಹಿತೆ ಕಲಂ** 324 **ಸಹವಾಚಕ ಕಲಂ** 34 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**4.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಮುಂದುವರೆದು, 2 ನೇ ಆರೋಪಿಯಾದ ನೀವು ಚಾಸಾ-1 ರವರು ತೊಟ್ಟಿದ್ದ ನೈಟಿಯನ್ನು ಹಿಡಿದು ಎಳೆದಾಡಿ ಹರಿದು ಹಾಕಿರುತ್ತೀರಿ ಹಾಗೂ 3 ಮತ್ತು 4 ನೇ ಆರೋಪಿತರಾದ ನೀವು ಚಾಸಾ-1 ರವರ ತಲೆ ಜುಟ್ಟನ್ನು ಹಿಡಿದು ಎಳೆದಾಡಿ ಬೆನ್ನಿಗೆ ಕೈಯಿಂದ ಗುದ್ದಿ ಅವರ ಮಾನಕ್ಕೆ ಭಂಗವನ್ನುಂಟುಮಾಡಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು **ಭಾರತ ದಂಡ ಸಂಹಿತೆ ಕಲಂ** 354-**ಬಿ ಸಹವಾಚಕ ಕಲಂ** 34 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**5.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವೆಲ್ಲರೂ ಸಮಾನ ಉದ್ದೇಶದಿಂದ ಮುಂದುವರೆದು, ನಿನ್ನನ್ನು ಇಷ್ಟಕ್ಕೆ ಬಿಡುವುದಿಲ್ಲ ನಿನಗೆ ಒಂದು ಗತಿ ಕಾಣಿಸುತ್ತೇವೆ, ಬೆದರಿಕೆ ಹಾಕಿದ್ದೂ ಅಲ್ಲದೆ 1 ನೇ ಆರೋಪಿಯಾದ ನೀವು ನನ್ನ ಹತ್ತಿರ ಲೈಸನ್ಸ್ ಕೋವಿ ಇದ್ದು, ಆ ಕೋವಿಯ ಗುಂಡಿನಿಂದ ನಿನ್ನನ್ನು ಹೊಡೆದು ಇಂದಲ್ಲ ನಾಳೆ ಕೊಲೆ ಮಾಡೇ ತೀರುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು **ಭಾರತ**

**ದಂಡ ಸಂಹಿತೆ ಕಲಂ** 506 **ಸಹವಾಚಕ ಕಲಂ** 34 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ.

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ? ಅವುಗಳು ನಿಮಗೆ ಅರ್ಥವಾಯಿತೇ?

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

3 ನೇ ಆರೋಪಿಯ ಉತ್ತರಃ

4 ನೇ ಆರೋಪಿಯ ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

3 ನೇ ಆರೋಪಿಯ ಉತ್ತರಃ

4 ನೇ ಆರೋಪಿಯ ಉತ್ತರಃ

*(ಆರೋಪಿತರಿಗೆ ದಿನಾಂಕ 01.06.2023 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)*

**Sd**/-

ಮೂಡಿಗೆರೆ
ದಿನಾಂಕಃ 01.06.2023

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.